ಗೃಹ ಮಂಡಳಿಯಲ್ಲಿ ನಿವೃತ್ತರಾದ ನೌಕರರು

4918 - ಶ್ರೀ ಸದಾನಂದಗೌಡ ಡಿ.ವಿ. (ಪುತ್ತೂರು) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ಗೃಹ ಮಂಡಳಿಯಲ್ಲಿ ನೇಮಿಸಿಕೊಳ್ಳಲಾಗಿರುವ ನಿವೃತ್ತ ನೌಕರರ ಸಂಖ್ಯೆ ಎಷ್ಟು? (ಹುದ್ದೆವಾರು ನೇಮಕದ ದಿನಾಂಕದ ವಿವರ ನೀಡುವುದು)*

ಆ) *ಇತ್ತೀಚಿನ ಕರ್ನಾಟಕ ಉಚ್ಚ ನ್ಯಾಯಾಲಯ ತೀರ್ಪಿನ ಪ್ರಕಾರ ಸರ್ಕಾರಿ ಸೇವೆಯಲ್ಲಿ ಇದ್ದು ನಿವೃತ್ತರಾದ ನೌಕರರನ್ನು ಸರ್ಕಾರಿ ನಿಗಮ: ಮಂಡಳಿಗಳಿಗೆ, ಸರ್ಕಾರಿ ಕಛೇರಿಗಳಿಗೆ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಬಾರದೆಂದು ಆದೇಶ ನೀಡಿದೆಯೆ?*

ಇ) *ಮಂಡಳಿಯಲ್ಲಿ ಅಧಿಕೃತ ಹುದ್ದೆಯನ್ನು ಅಲ್ಲಿನ ಉದ್ಯೋಗಿಗಳಿಗೆ ಪದೋನ್ನತಿ ನೀಡುವ ಮೂಲಕ ತುಂಬುವುದರ ಬದಲು ಬೇರೆ ಬೇರೆ ಇಲಾಖೆಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದವರು ಮತ್ತು ಖಾಸಗಿ ಸಂಸ್ಥೆ ಉದ್ಯೋಗಿಗಳನ್ನು ಗುತ್ತಿಗೆ ಆಧಾರದ ಹುದ್ದೆಗಳಿಗೆ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿರುವುದರಿಂದ ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶವನ್ನು ಉಲ್ಲಂಘನೆ ಮಾಡಿದಂತೆ ಆಗುವುದಿಲ್ಲವೆ?*

ಶ್ರೀ ಖಮರುಲ್ ಇಸ್ಲಂ (ವಸತಿ ಸಚಿವರು) :

ಅ) ಪ್ರಸ್ತುತ ಇಬ್ಬರೂ ಕೆಲಸ ಮಾಡುತ್ತಿದ್ದಾರೆ

1) ಶ್ರೀ. ಅಶ್ವತ್ಥನಾರಾಯಣ ತಾಂತ್ರಿಕ ಸಲಹೆಗಾರರು ದಿನಾಂಕ : 6.2.1999

2) ಶ್ರೀ. ತಮ್ಮಣ್ಣ ಆಡಳಿತ ಸಲಹೆಗಾರರು ದಿನಾಂಕ : 17.1.2000

ಆ) ಇಲ್ಲ.

ಇ) ಕರ್ನಾಟಕ ಗೃಹ ಮಂಡಳಿಯ ವೃಂದ ಮತ್ತು ನೇಮಕಾತಿ ನಿಯಮಾವಳಿಯಲ್ಲಿರುವ ಖಾಲಿ ಹುದ್ದೆಗಳಿಗೆ ನಿವೃತ್ತಿಯಾದವರನ್ನು ನೇಮಿಸಿಕೊಳ್ಳುವುದರ ಮೂಲಕ ಭರ್ತಿ ಮಾಡಿರುವುದಿಲ್ಲ.

ಗ್ರಾಮೀಣ ರಸ್ತೆಗಳ ಅಭಿವೃದ್ಧಿಯನ್ನು ಎ.ಪಿ.ಎಂ.ಸಿ. ಹಮ್ಮಿಕೊಂಡಿರುವ ವಿಚಾರ

4919 - ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಈ ಹಿಂದಿನ ಸರ್ಕಾರ ಹಮ್ಮಿಕೊಂಡಿರುವ ಗ್ರಾಮೀಣ ರಸ್ತೆಗಳ ಅಭಿವೃದ್ಧಿಯನ್ನು ಎ.ಪಿ.ಎಂ.ಸಿ. ಪುನಃ ಹಮ್ಮಿಕೊಳ್ಳುವ ಇರಾದೆ ಸರ್ಕಾರಕ್ಕೆ ಇದೆಯೆ?*

ಆ) *ಈ ಹಿಂದೆ ಎ.ಪಿ.ಎಂ.ಸಿ.ಯಿಂದ ರಚಿಸಲ್ಪಟ್ಟ ರಸ್ತೆಯ ನಿರ್ವಹಣೆ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವೇನು?*